ಸಿಸಿ ನಂ.1717/2021

**ಚಾಸಾ-1**

**ಪ್ರಾಸಾ-1**

**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ. 22.11.2022**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.**

**1.** ನಾನು 2016 ರಿಂದ ಪೋಲಿಸ ತರಬೇತಿ ಶಾಲೆಯಲ್ಲಿ ಅಹಾಯಕ ಕವಾಯತ್ ಬೋದಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸದರಿ ತರಬೇತಿ ಶಾಲೆ ಉಪನಗರ ಪೋಲಿಸ ಠಾಣೆ ಯಿಂದ 1 ಕಿ. ಮಿ ಅಂತರದಲ್ಲಿದೆ. ನನ್ನ ಮೇಲಾಧಿಕಾರಿ ರಿಸರ್ವ ಸಬ್ ಇನ್ಸಪೇಕ್ಟರ್ ರ್ಯಾಂಕನ ಓರ್ವ ಅಧಿಕಾರಿ ಇರುತ್ತಾರೆ. ಸದರಿ ನಮ್ಮ ತರಬೇತಿ ಶಾಲೆ ಪೋಲಿಸ ವರಿಷ್ಠಾಧಿಕಾರಿಗಳು ಪ್ರಾಶುಂಪಾಲರು ಆಗಿರುತ್ತಾರೆ.

2. ಮೊಬೈಲ್ ನಂ.9538291722 ನಿಂದ ದಿಃ 18.05.2018 ರಂದು ನನಗೆ 2 ಬಾರಿ ಕರೆ ಬಂದಿತ್ತು. ಮೊದಲ ಕರೆ ನನಗೆ ಮದ್ಯಾಹ್ನ 12.30 ರ ಸಮಯ ದಲ್ಲಿ ಬಂದಿತ್ತು. 2 ನೇ ಕರೆ 12.50 ರ ಸಮಯದಲ್ಲಿ ಬಂದಿತ್ತು. ಅದೇ ದಿನ ನನಗೆ ಸಂಜೆ 7.00 ರ ಸಮಯದಲ್ಲಿ ಚಾಸಾ9 ರವರಿಂದ ಕರೆ ಬಂದಿತ್ತು. ಸದರಿ ದಿಃ 18.05.2018 ರಂದು ಮದ್ಯಾಹ್ನ 12.30 ಹಾಗೂ 12.50 ರ ಸಮಯದಲ್ಲಿ ನನಗೆ ಕರೆ ಬಂದಿದ್ದು ಸದರಿ ಕರೆಗಳನ್ನು ಸ್ವಿಕರಿಸಿ ಮಾತನಾಡಿದಾಗ ನನಗೆ ಮಾತನಾಡಿದ ವ್ಯಕ್ತಿಯ ಬಗ್ಗೆ ಸಂಶಯ ಬಂದಿತ್ತು. ಚಾಸಾ9 ರವರು ಅದೇ ದಿನ ಸಂಜೆ 7.00 ರ ಸಮಯದಲ್ಲಿ ಕರೆ ಮಾಡಿದಾಗ ಅವರ ಕರೆಗೆ ಸಂಬಂದಪಟ್ಟಂತೆ ಸಂಶಯ ನನಗೆ ಬಂದಿತ್ತು.

3. ನಮ್ಮ ತರಬೇತಿ ಶಾಲೆಯಿಂದ ಪೋಲಿಸ ವರಿಷ್ಠಾಧಿಕಾರಿಗಳ ಕಚೇರಿ ನಡೆದುಕೊಂಡು ಹೋದರೇ 5 ನಿಮಿಷ ದಾರಿಯ ಅಂತರದಲ್ಲಿದೆ. ಹಾಗೂ ಆರ್ ಎಸ್ ಐ ನಮ್ಮ ಮೇಲ್ವಿಚಾರಕರಾಗಿದ್ದು ಸದರಿಯವರ ಕಚೇರಿ ನಮ್ಮ ತರಬೇತಿ

ಶಾಲೆಯಲ್ಲಿ ಇದೆ. ಸದರಿ ಸಮಯದ ಎಸ್ ಪಿ ರವರ ಕಚೇರಿ ಪೊನ ನಂಬರ ಹಾಗೂ ಆರ್ ಎಸ್ ಐ ರವರ ಮೊಬೈಲ್ ನಂಬರ ನನಗೆ ಗೊತ್ತಿತ್ತು. ದೂರನ್ನು ಯಾವ ರೀತಿ ದಾಖಲಿಸಬೇಕು ಎಂದು ನಾನು ಪೋಲಿಸನಾದ್ದರಿಂದ ನನಗೆ ಮಾಹಿತಿ ಇದೆ ಎಂದರೆ ಸರಿ. ನಾನು ಸದರಿ ಸಮಯದಲ್ಲಿ Android ಮೊಬೈಲ್ ಹೊಂದಿದ್ದೆ. Android ಮೊಬೈಲ್ ಗಳಲ್ಲಿ ಟ್ರೂ ಕಾಲರ್ , ರಿಕಾರ್ಡಿಂಗ ಫಿಸಿಲಿಟಿ ಇದೆ ಎಂದರೆ ಸರಿ. ಸದರಿ ಸಮಯದಲ್ಲಿ ಸದರಿ ಸೌಲಭ್ಯಗಳು ನನ್ನ ಮೊಬೈಲ್ ನಲ್ಲಿ ಇದ್ದವು ಎಂದರೆ ಸಾಕ್ಷಿ ಕಾಲ್ ರೆಕಾರ್ಡಿಂಗ್ ಫೆಸಿಲಿಟಿ ಮಾತ್ರ ಇತ್ತು ಟ್ರೂ ಕಾಲರ್ ಇರಲಿಲ್ಲ ಎನ್ನುತ್ತಾರೆ. ಹಾಗೂ ಸದರಿ ಮೊಬೈಲ್ ಬಳಸುವ ಸಂಪೂರ್ಣ ಮಾಹಿತಿ ನನಗೆ ಇತ್ತು ಎಂದರೆ ಸರಿ.

4. ದಿಃ 18.05.2018 ರಂದು ನನಗೆ ಕರೆ ಬಂದ ದಿನ ನಾನು ರಜೆಯಲ್ಲಿದ್ದೆ. ಸದರಿ ತರಬೇತಿ ಶಾಲೆಯಲ್ಲಿ ತರಬೇತಿ ಪರೀಕ್ಷಾರ್ಥಿಗಳಿಗೆ ಕವಾಯಿತ್ ಕಲಿಸುವುದು ಮಾತ್ರ ನನ್ನ ಕೆಲಸ ಎಂದರೆ ಸರಿ. ಸದರಿ ತರಬೇತಿ ಶಾಲೆಯಲ್ಲಿ ಅಬ್ಯರ್ಥಿಗಳಿಗೆ ಏನಾದರೂ ತೊಂದರೆಯಾದರೇ ಅದನ್ನು ನಿವಾರಿಸುವ ಜವಾಬ್ದಾರಿ ಅಸಿಸ್ಟಂಟ್ ಚೀಫ್ ಡ್ರೀಲ್ ಇನ್ಸಸ್ಟ್ರಕ್ಟರ್ ರವರು ಇರುತ್ತದೆ. ಸದರಿ ಶಾಲೆಯಲ್ಲಿ ಬೋದನಾ ಸಿಬ್ಬಂದಿಗೆ ತೊಂದರೆಯಾದರೇ ಅದನ್ನು ನಿವಾರಿಸುವ ಜವಾಬ್ದಾರಿ ಅಸಿಸ್ಟಂಟ್ ಚೀಫ್ ಡ್ರೀಲ್ ಇನ್ಸಸ್ಟ್ರಕ್ಟರ್ ರವರದ್ದು ಇರುತ್ತದೆ.

5. ದಿಃ 18.05.2018 ರಂದು ಮದ್ಯಾಹ್ನ 12.30 ಹಾಗೂ 12.50 ರ ಸಮಯದಲ್ಲಿ ನನಗೆ ಬಂದ ಕರೆಗಳ ಬಗ್ಗೆ ಮಾಹಿತಿಯನ್ನು ನಾನು ತ್ವರಿತವಾಗಿ ಮದ್ಯಾಹ್ನ 3.05 ರ ಸಮಯದಲ್ಲಿ ಡಿವೈಎಸ್‌ಪಿ , ಚೀಫ್ ಡ್ರೀಲ್ ಇನ್ಸಸ್ಟ್ರಕ್ಟರ್ ಮತ್ತು ಅಸಿಸ್ಟಂಟ್ ಚೀಫ್ ಡ್ರೀಲ್ ಇನ್ಸಸ್ಟ್ರಕ್ಟರ್ ರವರಿಗೆ ತಿಳಿಸಿದೆ. ನಮ್ಮ ಇಲಾಖೆಯಲ್ಲಿ ಮೊಬೈಲ್ ಕಾಲರ್ ಐಡಿ , ಟವರ್ ಲೊಕೇಷನ ತನಿಖೆಗೆ ಸಂಬಂದಿಸಿದಂತೆ ಬೇರೆ ವಿಂಗ್ ಇದೆ ಎಂದರೆ ಸರಿ. ಸದರಿ ಡಿವೈಎಸಪಿ ರವರು

ನನಗೆ ಕರೆ ಬಂದ ಮೊಬೈಲ್ ನಂಬರನ್ನು ಪಡೆದು ನಾನು ನೋಡುತ್ತೇನೆ ಎಸ್ ಪಿ ರವರ ಜೊತೆ ಮಾತನಾಡಿ ನಿಮಗೆ ತಿಳಿಸುತ್ತೇನೆ ಎಂದು ಹೇಳಿದರು. ಸದರಿ ಮೊಬೈಲ್ ನಂ.9538291722 ಯಾರ ಹೆಸರಿನಲ್ಲಿ ಇದೆ ಎಂದು ನಾನು ದೂರು ದಾಖಲಿಸುವ ಮುನ್ನ ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ನಾನು ದೂರು ನೀಡಿದ ದಿನ ಪೋಲಿಸರು ನನ್ನ ಮೊಬೈಲ್ ನ್ನು ವಶಕ್ಕೆ ಪಡೆದರು. ಸದರಿ ನನ್ನ ಮೊಬೈಲ್ ನ್ನು ಪೋಲಿಸರು ತಮ್ಮ ವಶಕ್ಕೆ ಪಡೆದ ಬಗ್ಗೆ ಪಂಚನಾಮೆಯನ್ನು ಮಾಡಲಿಲ್ಲ. ಸದರಿ ಮೊಬೈಲ್ ನ್ನು ಪೋಲಿಸರು ವಶಕ್ಕೆ ಪಡೆದ ದಿನ ರಾತ್ರಿ 1.00 ಗಂಟೆಗೆ ನನಗೆ ಮರಳಿಸಿದರು. ದಿಃ 19.05.2018 ರಂದು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಅದೇ ರೀತಿ ದಿಃ 22.05.2018 ರಂದು ಪೋಲಿಸರು ನನ್ನ ಮರು ಹೇಳಿಕೆಯನ್ನು ಪಡೆದಿರುತ್ತಾರೆ. ಸದರಿ ಹೇಳಿಕೆಗಳನ್ನು ಪಡೆಯುವ ಸಂದರ್ಭದಲ್ಲಿ ಪೋಲಿಸರು ನನ್ನ ಮೊಬೈಲ್ ನ್ನಲಾಗಲೀ ಅಥವಾ ಬೇರೆ ಯಾವ ಮೊಬೈಲ್ ನ್ನಲಾಗಲಿ ತೊರಿಸಿ ಹೇಳಿಕೆಗಳನ್ನು ಪಡೆಯಲಿಲ್ಲ. ಪೋಲಿಸರು ಈ ಪ್ರಕರಣ ತನಿಖೆ ಕಾಲಕ್ಕೆ ನನ್ನ ಮಾದರಿ ದ್ವನಿಯನ್ನು ಪಡೆದುಕೊಂಡಿಲ್ಲ. ಪೋಲಿಸರು ನನ್ನ ಮೊಬೈಲ್‌ನ ಸಿಮ್ ಕಾರ್ಡ ಹಾಗೂ ಮೆಮೊರಿ ಕಾರ್ಡನ್ನು ತನಿಖೆಗಾಗಿ ತೆಗೆದುಕೊಂಡಿಲ್ಲ. ಸದರಿ ದಿಃ 18.05.2018 ರ ಕಾಲ್ ಡಿಟೆಲ್ಸನ ಸ್ಕ್ರೀನ್ ಶಾಟ್ ನ್ನು ಪೋಲಿಸರು ನನ್ನಿಂದ ಪಡೆಯಲಿಲ್ಲ.

6. ದಿಃ 18.05.2018 ರಂದು ನನಗೆ ಕರೆ ಬಂದ ಬಗ್ಗೆ ನಾನು ಎಸ್ ಪಿ ಕಚೇರಿಗೆ ಹೋಗಿ ವಿಚಾರಣೆ ಮಾಡಲಿಲ್ಲ. ಚಾಸಾ9 ರವರಿಂದ ಬಂದ ಕರೆಗೆ ಸಂಬಂದದಿಸಿದಂತೆಯೂ ಸಹ ನಾನು ಎಸ್ ಪಿ ಕಚೇರಿಗೆ ಹೊಗಿ ವಿಚಾರಣೆ ಮಾಡಲಿಲ್ಲ.

**ಸಿಸಿ ನಂ.1717/2021**

**ಚಾಸಾ-1**

**ಪ್ರಾಸಾ-1**

( ಈಗ ಸಮಯ ಸಂಜೆ 6.00 ಗಂಟೆ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಗಿದೆ.)

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.